ನಕ್ಷತ್ರರಹಿತ 45
07/3/2020

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	374 (514)
ಮಾನ್ಯ ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	09/03/2020
ಉತ್ತರಿಸಬೇಕಾದ ಸಚಿವರು	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
(ಅ)	ಬ್ರಿಮ್ಸ್ ನಲ್ಲಿ ನಡೆದಿದೆ ಎನ್ನಲಾದ ಸುಮಾರು ರೂ.18 ಕೋಟಿ ಅವ್ಯಹಾರದ ತನಿಖೆಗಾಗಿ ಎ.ಸಿ.ಬಿ.ಗೆ ವಹಿಸಲಾಗಿದ್ದು ಇದುವರೆಗೆ ತನಿಖೆ ಏಕೆ ಪ್ರಾರಂಭವಾಗಿಲ್ಲ; ಅದಕ್ಕಾಗಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ;	ಬಂದಿದೆ. ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಿದರ್ ಇಲ್ಲಿ ಖರೀದಿ, ಸಿಬ್ಬಂದಿ ನೇಮಕ ಮತ್ತು ಇತರೆ ಕಾಮಗಾರಿ/ಖರೀದಿಗಳಲ್ಲಿ ನಡೆದಿದೆ ಎನ್ನಲಾದ ಸುಮಾರು ರೂ.18 ಕೋಟಿ ಹಣದ ದುರುಪಯೋಗ ಹಾಗೂ ಅವ್ಯವಹಾರ ನಡೆದಿರುವುದಾಗಿ ಭ್ರಷ್ಟಾಚಾರ ನಿಗ್ರಹದಳದಿಂದ ಸರ್ಕಾರದಲ್ಲಿ ಸ್ವೀಕೃತವಾದ ದೂರಿನನ್ವಯ ಸರ್ಕಾರದ ಆದೇಶ ಸಂಖ್ಯೆ:ಆಕುಕ 122 ಎಂಎಸ್‌ಎಫ್ 2018, ದಿನಾಂಕ:29-06-2018 ರಲ್ಲಿ ಈ ಕೆಳಕಂಡ ಸಿಬ್ಬಂದಿಗಳ ವಿರುದ್ಧ ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹದಳಕ್ಕೆ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ. 1. ಡಾ:ಚನ್ನಣ್ಣ ಸಿ, ಹಿಂದಿನ ನಿರ್ದೇಶಕರು, 2. ಡಾ: ಶಿವಕುಮಾರ್ ಶೆಟಕಾರ, ಹಿಂದಿನ ವೈದ್ಯಕೀಯ ಅಧೀಕ್ಷಕರು . 3. ಶ್ರೀ ಆನಂದಸಾಗರ ರೆಡ್ಡಿ, ಹಿಂದಿನ ಸಿ.ಇ.ಓ. 4.ಶ್ರೀಮತಿ ಅನುಸೂಯಾ, ಸಹಾಯಕ ಆಡಳಿತಾಧಿಕಾರಿಗಳು 5. ಶ್ರೀ ಬಾಬು ಕೋಟೆ, ಕಛೇರಿ ಅಧೀಕ್ಷಕರು. 6. ಶ್ರೀ ಪ್ರಕಾಶ ಶರಣಪ್ಪ ಮಡಿವಾಳ, ಕಛೇರಿ ಅಧೀಕ್ಷಕರು 7. ಶ್ರೀ ಪ್ರಕಾಶ ಮಾಳಗೆ, ಪ್ರ.ದ.ಸ 8. ಶ್ರೀಮತಿ ವರ್ಷ ದೇಶಮುಖ್,ಪ್ರ.ದ.ಸ 9. ಶ್ರೀ ಮಾಚೆ ಕಲ್ಲಪ್ಪ, ನಿವೃತ್ತ ಕಛೇರಿ ಅಧೀಕ್ಷಕರು 10. ಶ್ರೀ ಶಿವಾಜಿ, ದ್ವಿ.ದ.ಸ. ಈ ಪ್ರಕರಣದ ಕುರಿತು ತನಿಖೆ ನಡೆಸಲು ಅಭಿಯೋಜನಾ ಮಂಜೂರಾತಿ ನೀಡಿ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ:ಆಕುಕ 122 ಎಂಎಸ್‌ಎಫ್ 2018 ದಿನಾಂಕ: 29.06.2018 ಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟೀಷನ್ ಸಂ: 28544-28545/2018 & 29892-29895/2018ರ ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿರುತ್ತದೆ. ಆದಾಗ್ಯೂ, ಕ್ರಮ ಸಂಖ್ಯೆ:03 ರಿಂದ 10 ರ ವರೆಗಿನ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹದಳದಿಂದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲಾಗಿರುತ್ತದೆ. ಸದರಿ ಕ್ರಮವನ್ನು ಪ್ರಶ್ನಿಸಿ ಆರೋಪಿತ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಹಾಗೂ ಕಲಬುರ್ಗಿ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯಗಳು ಮಧ್ಯಂತರ ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಎಂಇಡಿ 78 ಎಂ ಎಸ್ ಎಫ್ 2020

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.